# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

**ಜ್ಞಾನಸಾಗರ ಆವರಣ, ವಿನಾಯಕ ನಗರ, ಬಳ್ಳಾರಿ - 583 105**

ಕುಲಸಚಿವರು (ಮೌಲ್ಯಮಾಪನ) ದೂರವಾಣಿ ಸಂ. 08392-241011


ಕ್ರ.ಸಂ. ವಿಶ್ರೀಕೃವಿಬ/ಪರೀಕ್ಷಾ/ಅರಾಅಪಮ/2018-19/ 231 ದಿನಾಂಕ. 12-04-2018

ಗೆ,

ಕುಲಸಚಿವರು
ವಿಶ್ರೀಕೃ ವಿಶ್ವವಿದ್ಯಾಲಯ
ಬಳ್ಳಾರಿ-583105.

ಮಾನ್ಯರೇ,

ವಿಷಯ: ಅನ್ಯ ರಾಜ್ಯ ಹಾಗೂ ಅನ್ಯ ಪರೀಕ್ಷಾ ಮಂಡಳಿಗಳಿಂದ ಬಂದಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಹಾಗೂ ಪರೀಕ್ಷಾ ಫಲಿತಾಂಶ ಪ್ರಕಟಿಸಲು ಆದೇಶ ನೀಡುವ ಕುರಿತು.

ಉಲ್ಲೇಖ: 1. ಮಾನ್ಯ ಕುಲಪತಿಗಳ ಪತ್ರ ಸಂಖ್ಯೆ: VSKUB/VCPS/KSOU/18-19/05 ದಿನಾಂಕ. 02.04.2018.
2. ಕುಲಸಚಿವರ ಪತ್ರ ಸಂ. ವಿಶ್ರೀಕೃವಿಬ/ಆಡಳಿತ/2018-19/20 ದಿ. 04.04.2018.
3. ಈ ಕಛೇರಿ ಪತ್ರ ಸಂಖ್ಯೆ. ವಿಶ್ರೀಕೃವಿಬ/ಪರೀಕ್ಷಾ/ಅರಾಅಪಮ/2018-19/97 ದಿನಾಂಕ. 05-04-2018.
4. ಕುಲಸಚಿವರ ಸುತ್ತೋಲೆ ಸಂ. ವಿಶ್ರೀಕೃವಿಬ/ಆಡಳಿತ/2018-19/36 ದಿ. 11.04.2018.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಅನ್ಯ ರಾಜ್ಯ ಹಾಗೂ ಅನ್ಯ ಪರೀಕ್ಷಾ ಮಂಡಳಿಗಳಿಂದ ಬಂದಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ಬರೆಯಲು ಹಾಗೂ ಈಗಾಗಲೇ ಬರೆದ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸುವ ಸಂಬಂಧ ಛಾಪಾ ಕಾಗದದ ಮೇಲೆ ಮುಚ್ಚಳಿಕೆ ಪತ್ರ ಹಾಗೂ ಉಚ್ಚ ನ್ಯಾಯಾಲಯದಿಂದ ದಾವೆ ಹಿಂಪಡೆದ ಬಗ್ಗೆ ದೃಢೀಕರಣ ಪತ್ರವನ್ನು ಸಂಬಂಧಿಸಿದ ವಿದ್ಯಾರ್ಥಿಗಳಿಂದ ಪಡೆದು ಕುಲಸಚಿವರು(ಮೌಲ್ಯಮಾಪನ) ಇವರಿಗೆ ಸಲ್ಲಿಸಿದ್ದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಉಲ್ಲೇಖ-4 ರನ್ವಯ ಸುತ್ತೋಲೆಯನ್ನು ಹೊರಡಿಸಿ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ ತಿಳಿಸಿರುತ್ತೀರಿ. ಆದರೆ ಉಲ್ಲೇಖ-3 ರಂತೆ ಪತ್ರ ಬರೆದಂತೆ ಪರೀಕ್ಷಾ ವಿಭಾಗವು ಯಾವುದೇ ತರಹದ ಮುಚ್ಚಳಿಕೆ ಪತ್ರ ಹಾಗೂ ಇತರೆ ದಾಖಲಾತಿಗಳನ್ನು ತೆಗದುಕೊಳ್ಳುವುದಿಲ್ಲ ಅವುಗಳನ್ನು ತೆಗೆದುಕೊಳ್ಳುವುದು ಕುಲಸಚಿವರು(ಆಡಳಿತ) ಇವರ ಅಧಿನದಲ್ಲಿ ಬರುವ ವಿದ್ಯಾ ಮಂಡಳ ವಿಭಾಗದ ಕೆಲಸವಾಗಿರುತ್ತದೆ ಹಾಗೂ ಪರೀಕ್ಷಾ ವಿಭಾಗಕ್ಕೆ ಸಂಬಂಧಿಸಿರುವುದಿಲ್ಲ. ಆದ್ದರಿಂದ ಪರೀಕ್ಷಾ ವಿಭಾಗಕ್ಕೆ ವಿದ್ಯಾರ್ಥಿಗಳ ಪಟ್ಟಿ, ಪರೀಕ್ಷೆ ಬರೆಸಲು ಹಾಗೂ ಹಿಂದಿನ ಪರೀಕ್ಷೆಗಳ ಫಲಿತಾಂಶವನ್ನು ಪ್ರಕಟಿಸಲು ಆದೇಶವನ್ನು ನೀಡಿದರೆ ಸಾಕು ಎಂದು ತಿಳಿಸಿದ್ದೇವೆ.

ಕಾರಣ ತಾವು ಉಲ್ಲೇಖ-4 ರಂತೆ ಸೂಚಿಸಿದಂತೆ ಯಾವುದೇ ತರಹದ ದಾಖಲಾತಿಗಳನ್ನು ವಿದ್ಯಾರ್ಥಿಗಳಿಂದಾಗಲಿ ಅಥವಾ ಪ್ರಾಂಶುಪಾಲರಿಂದಾಗಲಿ ಸ್ವೀಕರಿಸುವುದಿವೆಂದು ಹಾಗೂ ಪರೀಕ್ಷಾ ವಿಭಾಗ ಪರೀಕ್ಷೆಗಳನ್ನು ಆಯೋಜಿಸಲು ಮತ್ತು ಹಿಂದಿನ ಪರೀಕ್ಷೆಗಳ ಫಲಿತಾಂಶವನ್ನು ಪ್ರಕಟಿಸಲು ವಿದ್ಯಾರ್ಥಿಗಳ ಪಟ್ಟಿಯೊಂದಿಗೆ ಆದೇಶವನ್ನು ನೀಡುವಂತೆ ಈ ಮೂಲಕ ತಮ್ಮಲ್ಲಿ ಮತ್ತೋಮ್ಮೆ ಕೋರಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

12/4/18

ಕುಲಸಚಿವರು(ಮೌಲ್ಯಮಾಪನ)

REGISTRAR (EVAL)
Vijayanagara Sri Krishnadevaraya University
Jnana Sagar Campus, Vinayakanagar,
Cantonment, BALLARI-583 104.

ಪ್ರತಿಗಳು:

೧. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಶ್ರೀಕೃವಿಶ್ವವಿದ್ಯಾಲಯ, ಬಳ್ಳಾರಿ ರವರಿಗೆ ಮಾಹಿತಿಗಾಗಿ.

೨. ಸಂಯೋಜಕರು, ಕಾನೂನು ಘಟಕ, ವಿಶ್ರೀಕೃವಿಶ್ವವಿದ್ಯಾಲಯ, ಬಳ್ಳಾರಿ ರವರಿಗೆ ಮಾಹಿತಿಗಾಗಿ.

೩. ಸಂಬಂಧಿಸಿದ ಎಲ್ಲಾ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ ಮಾಹಿತಿಗಾಗಿ ಹಾಗೂ ಈ ಪತ್ರದಲ್ಲಿ ತಿಳಿಸಿದಂತೆ ಸದರಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಯಾವುದೇ ತರಹದ ದಾಖಾಲಾತಿಗಳನ್ನು ನಮಗೆ ಕಳುಹಿಸಬಾರದೆಂದು, ಕುಲಸಚಿವರು(ಆಡಳಿತ) ಇವರಿಗೆ ಕಳುಹಿಸಿಕೊಡಲು ತಿಳಿಸಲಾಗಿದೆ ಹಾಗೂ ಒಂದು ವೇಳೆ ನಮಗೆ ಕಳುಹಿಸಿದರೆ ನಾವು ಅವುಗಳನ್ನು ಸ್ವೀಕರಿಸುವುದಿಲ್ಲವೆಂದು ಈ ಮೂಲಕ ತಮ್ಮ ಗಮನಕ್ಕೆ ತರಲಾಗಿದೆ.

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ-583 105

ಪ್ರೊ.ಎಸ್.ಎ.ಪಾಟೀಲ
ಕುಲಸಚಿವರು

ದೂರವಾಣಿ: 08392-242873/ಫ್ಯಾಕ್ಸ್: 08392- 242097

ಸಂಖ್ಯೆ: ವಿಶ್ರೀಕೃವಿಬ/ಆಡಳಿತ/2018-19/ 36 ದಿನಾಂಕ: 11.04.2018

# ಸುತ್ತೋಲೆ

ವಿಷಯ : ಅನ್ಯ ರಾಜ್ಯ ಹಾಗೂ ಅನ್ಯ ಪರೀಕ್ಷಾ ಮಂಡಳಿಗಳ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ ಪ್ರಕಟಣೆ ಹಾಗೂ ಮುಂಬರುವ ಪರೀಕ್ಷೆಗಳಿಗೆ ಪರೀಕ್ಷಾ ಅರ್ಜಿ ತುಂಬುವ ಕುರಿತು.

ಉಲ್ಲೇಖ : 1. ಮಾನ್ಯ ಕುಲಪತಿಗಳ ಪತ್ರ ಸಂಖ್ಯೆ: ವಿಶ್ರೀಕೃವಿಬ/ವಿ.ಸಿ.ಪಿ.ಎಸ್/ಕೆ.ಎಸ್.ಓ.ಯು/2018-19/05, ದಿನಾಂಕ: 02.04.2018.

2. ವಿಶ್ರೀಕೃವಿಬ/ಪರೀಕ್ಷಾ/ಅರಾಅಪಮ/2018-19/97, ದಿನಾಂಕ: 05.04.2018.

* * *

ಉಲ್ಲೇಖ: 01ರ ಪತ್ರ ಹಾಗೂ ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ, ಈ ಮೂಲಕ ಸಂಬಂಧಪಟ್ಟ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ತಿಳಿಯಪಡಿಸುವುದೇನೆಂದರೆ, ಅನ್ಯ ರಾಜ್ಯ ಹಾಗೂ ಅನ್ಯ ಪರೀಕ್ಷಾ ಮಂಡಳಿಗಳ ವಿದ್ಯಾರ್ಥಿಗಳ ತಡೆ ಹಿಡಿಯಲಾದ ಪರೀಕ್ಷಾ ಫಲಿತಾಂಶ ಪ್ರಕಟಣೆ ಹಾಗೂ ಮುಂಬರುವ ಪರೀಕ್ಷೆಗಳಿಗೆ ಪರೀಕ್ಷಾ ಅರ್ಜಿ ತುಂಬಲು ಅನುಮತಿ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ, ಈ ಪತ್ರದೊಂದಿಗೆ ಮುಚ್ಚಳಿಕೆ ಪತ್ರಗಳ ನಮೂನೆಗಳನ್ನು ಲಗತ್ತಿಸಿದ್ದು, ಸಂಬಂಧಪಟ್ಟ ವಿದ್ಯಾರ್ಥಿಗಳು ಉಚ್ಚ ನ್ಯಾಯಾಲಯದಿಂದ ದಾವೆ ಹಿಂಪಡೆದ ಬಗ್ಗೆ ದೃಢೀಕರಣ ಪತ್ರ ಹಾಗೂ ಮುಚ್ಚಳಿಕೆ ಪತ್ರಗಳನ್ನು ಭರ್ತಿ ಮಾಡಿದ ದಾಖಲೆಗಳನ್ನು ಸಂಬಂಧಪಟ್ಟ ವಿದ್ಯಾರ್ಥಿಗಳಿಂದ ಪಡೆದು ಸಂಬಂಧಪಟ್ಟ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು ದೃಢೀಕರಣದೊಂದಿಗೆ, ಕುಲಸಚಿವರು(ಮೌಲ್ಯಮಾಪನ), ವಿಶ್ರೀಕೃವಿವಿ, ಬಳ್ಳಾರಿ ಇವರಿಗೆ ಸಲ್ಲಿಸಿದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು, ಎಂದು ತಿಳಿಸಲು ಮಾನ್ಯ ಕುಲಪತಿಗಳಿಂದ ನಿರ್ದೇಶಿತನಾಗಿದ್ದೇನೆ.

12/4/18

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಗೆ.
ಸಂಬಂಧಪಟ್ಟ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ-
-ಸದರಿ ಮಾಹಿತಿಯನ್ನು ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ತಕ್ಷಣ ತಿಳಿಸಲು ಸೂಚಿಸಿದೆ.

ಪ್ರತಿಗಳನ್ನು:

01. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
02. ಮಾನ್ಯ ಕುಲಸಚಿವರು(ಮೌಲ್ಯಮಾಪನ), ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
03. ಸಂಯೋಜಕರು, ಕಾನೂನು ಕೋಶ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
04. ಕಛೇರಿ ಪ್ರತಿ

V.S.K ... BALLARI.
I.W No. 235 12/04/18
Signature